


(41ನೇ ಪುಟದಿಂದ)

ಆದರೆ, ಇವರ ನಾಯಕತ್ವದಲ್ಲಿ ಭಾರತ ವಿದೇಶದಲ್ಲಿ ಒಂದೂ ಸರಣಿ ಗೆದ್ದಿಲ್ಲ. ಆದ್ದರಿಂದ 2015ರ ವಿಶ್ವಕಪ್ ಭಾರತದ ಪಾಲಿಗೆ ಕಬ್ಬಿಣದ ಕಡಲೆ ಎನಿಸಿತ್ತು. ಈ ಕಾರಣಕ್ಕಾಗಿ ದೋನಿ ಪಡೆ ಪ್ರತಿಷ್ಠಿತ ಟೂರ್ನಿಯಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರೆ ಸಾಕು ಎನ್ನುವ ಮಾತುಗಳು ಕೇಳಿ ಬಂದಿದ್ದವು.

ಭಾರತ ಟ್ರೋಫಿ ಗೆಲ್ಲಲಿ ಎನ್ನುವ ಕಾರಣಕ್ಕಾಗಿಯೇ ಬಿಸಿಸಿಐ ಆಸ್ಟ್ರೇಲಿಯಾದ ನೆಲದಲ್ಲಿ ವಿಶ್ವಕಪ್‌ಗೂ ಮೂರು ತಿಂಗಳು ಮೊದಲು ಟೆಸ್ಟ್ ಮತ್ತು ತ್ರಿಕೋನ ಏಕದಿನ ಸರಣಿ ಆಯೋಜಿಸಿತ್ತು. ನಾಲ್ಕು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಎರಡು ಡ್ರಾ ಆದವು. ಇನ್ನೆರೆಡು ಪಂದ್ಯಗಳಲ್ಲಿ ಭಾರತ ಸೋಲು ಕಂಡಿತ್ತು. ಟೆಸ್ಟ್ ಸರಣಿಗೂ ಮೊದಲು ಆಡಿದ್ದ ಎರಡು ಅಭ್ಯಾಸ ಪಂದ್ಯ–ಗಳಲ್ಲಿಯೂ ಭಾರತ ಡ್ರಾಕ್ಕೆ ಸಮಾಧಾನ ಪಟ್ಟುಕೊಂಡಿತ್ತು.

ಭಾರತ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ನಡುವಿನ ತ್ರಿಕೋನ ಸರಣಿ–ಯಲ್ಲೂ ದೋನಿ ಪಡೆಗೆ ನಿರಾಸೆ ತಪ್ಪಲಿಲ್ಲ. ಈ ಸರಣಿಯಲ್ಲಿ ಭಾರತ ಆತಿಥೇಯರ ವಿರುದ್ಧ ಒಂದೂ ಪಂದ್ಯ ಗೆಲ್ಲಲಿಲ್ಲ! ವಿಶ್ವಕಪ್ ಪಂದ್ಯಗಳು ಆರಂಭವಾಗುವ ಮುನ್ನ ಭಾರತದ ಬಗ್ಗೆ ಹೆಚ್ಚು ನಿರೀಕ್ಷೆಗಳು ಇರಲಿಲ್ಲ.

23 ವರ್ಷಗಳ ಹಿಂದೆ ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಆತಿಥ್ಯದಲ್ಲಿ ನಡೆದ ವಿಶ್ವಕಪ್ ಟೂರ್ನಿಯಲ್ಲಿ ಭಾರತದ ಆಟ ನೋಡಿದರೆ ಈಗಿನ ಸಾಧನೆ ಉತ್ತಮವೆನಿಸುತ್ತದೆ. 1992ರಲ್ಲಿ ಮಹಮ್ಮದ್ ಅಜರುದ್ದೀನ್ ನಾಯಕತ್ವದ ತಂಡ ಆಡಿದ ಐದು ಲೀಗ್ ಪಂದ್ಯಗಳಲ್ಲಿ ಎರಡರಲ್ಲಷ್ಟೇ ಗೆದ್ದಿತ್ತು. ಜಿಂಬಾಬ್ವೆ ಮತ್ತು ಪಾಕಿಸ್ತಾನದ ಎದುರು ಆ ಎರಡು ಜಯ ಲಭಿಸಿದ್ದವು. ಏಕದಿನ ಕ್ರಿಕೆಟ್‌ನಲ್ಲಿ ಬಲಿಷ್ಠವೆನಿಸಿರುವ ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ಎದುರು ಭಾರತಕ್ಕೆ ಆಗ ಜಯ ಸಾಧ್ಯವಾಗಿರಲಿಲ್ಲ.

ನಾಲ್ಕು ವರ್ಷಗಳ ಹಿಂದಿನ ಸಂಗತಿಯನ್ನೂ ಇಲ್ಲಿ ಪ್ರಸ್ತಾಪಿಸಬೇಕಿದೆ. 2011–12ರಲ್ಲಿ ಟೆಸ್ಟ್ ಸರಣಿ ಆಡಲು ಭಾರತ ತಂಡ ಆಸ್ಟ್ರೇಲಿಯಾಕ್ಕೆ ತೆರಳಿ ಆಡಿದ ನಾಲ್ಕೂ ಪಂದ್ಯಗಳಲ್ಲಿ ಸೋತಿತ್ತು. ಆದ್ದರಿಂದ ಆಸೀಸ್ ಪ್ರವಾಸವೆಂದರೆ ಮೊದಲಿನಿಂದಲೂ ಭಾರತಕ್ಕೆ ಅದೇನೋ ಹಿಂಜರಿಕೆ. ಹಾಗಾಗಿಯೇ ಭಾರತ ಈ ಸಲ ಟ್ರೋಫಿ ಗೆಲ್ಲುವ ನೆಚ್ಚಿನ ತಂಡವೆಂದು ಹೆಚ್ಚಿನವರು ಒಪ್ಪಿಕೊಂಡಿರಲಿಲ್ಲ.

'ನಾನು ಭಾರತೀಯ. ನನ್ನ ಬೆಂಬಲ ಭಾರತಕ್ಕೆ. ಆದರೆ, ಸೆಮಿಫೈನಲ್‌ನಲ್ಲಿ ಆಸ್ಟ್ರೇಲಿಯಾವೇ ಗೆಲ್ಲುತ್ತದೆ ಎಂದು ಮನಸ್ಸು ಪದೇ ಪದೇ ಹೇಳುತ್ತಿದೆ' ಎಂದು ಮಾಜಿ ನಾಯಕ ಸುನಿಲ್ ಗಾವಸ್ಕರ್ ಪಂದ್ಯದ ಮೊದಲೇ ಹೇಳಿದ್ದರು. ಆಸ್ಟ್ರೇಲಿಯಾದ ಇನಿಂಗ್ಸ್ ಮುಗಿದಾಗ ಟಿವಿ ಸ್ಟುಡಿಯೊದಲ್ಲಿದ್ದ ರಾಹುಲ್ ದ್ರಾವಿಡ್ 'ಭಾರತ ಗೆಲ್ಲುವುದು ಕಷ್ಟ' ಎನ್ನುವ ಅರ್ಥದಲ್ಲಿ ಮಾತನಾಡಿದ್ದರು.

ವಿಶ್ವಕಪ್‌ನ ಲೀಗ್ ಹಂತದಲ್ಲಿ ದೋನಿ ಪಡೆ ದುರ್ಬಲ ಯುಎಇ, ವೆಸ್ಟ್ ಇಂಡೀಸ್, ಐರ್ಲೆಂಡ್, ಜಿಂಬಾಬ್ವೆ ಎದುರು ಗೆದ್ದಿತ್ತು. ಕ್ವಾರ್ಟರ್ ಫೈನಲ್–ನಲ್ಲಿ ಬಾಂಗ್ಲಾ ತಂಡವನ್ನು ಮಣಿಸಿತ್ತು. ಐಸಿಸಿ ರ‍್ಯಾಂಕ್‌ನಲ್ಲಿ ಅಗ್ರಸ್ಥಾನ ಹೊಂದಿರುವ ಆಸ್ಟ್ರೇಲಿಯಾ ತಂಡ ಭಾರತಕ್ಕೆ ಸವಾಲಾಗಿ ಪರಿಣಮಿಸಿತು.

ಭಾರತ ಕ್ವಾರ್ಟರ್ ಫೈನಲ್‌ವರೆಗೆ ಬೌಲಿಂಗ್‌ನಲ್ಲಿ ಉತ್ತಮ ಸಾಮರ್ಥ್ಯ ತೋರಿತ್ತು. ನಮ್ಮ ಬೌಲರ್‌ಗಳ ಎದುರು ಯಾರೂ ಪೂರ್ಣ 50 ಓವರ್ ಆಡಿರಲಿಲ್ಲ. ಏಳು ಪಂದ್ಯಗಳಿಂದ ಭಾರತ ಎದುರಾಳಿ ತಂಡದ 70 ವಿಕೆಟ್–ಗಳನ್ನು ಕಬಳಿಸಿತ್ತು. ಶಮಿ ಮತ್ತು ಉಮೇಶ್ ಯಾದವ್ ಚುರುಕಿನ ಬೌಲಿಂಗ್ ಮಾಡಿದ್ದರು. ಆದರೆ, ಇವರು ಮಹತ್ವದ ಸೆಮಿಫೈನಲ್‌ನಲ್ಲಿ ಎಡವಿದರು.

ಟೂರ್ನಿಯುದ್ದಕ್ಕೂ ಉತ್ತಮ ಆಟವಾಡಿದ್ದ ಧವನ್, ರೈನಾ ಮತ್ತು ಒಂದು ಶತಕ ಬಾರಿಸಿದ್ದ ವಿರಾಟ್ ಕೊಹ್ಲಿ ಆಸ್ಟ್ರೇಲಿಯಾದ ಎದುರು ಮುಗ್ಗರಿಸಿದರು. ನಾಲ್ಕು ಬಾರಿಯ ಚಾಂಪಿಯನ್ ತಂಡದ ಎದುರು ಆಡುವಾಗ ಇನ್ನಷ್ಟು ಸಿದ್ಧತೆ ಅಗತ್ಯವಿತ್ತು. ಕೊಹ್ಲಿ, ಆಟಕ್ಕಿಂತ ಹೆಚ್ಚಾಗಿ ಗೆಳತಿ ಅನುಷ್ಕಾ ಶರ್ಮಾ ವಿಚಾರ–ದಲ್ಲಿ ಹೆಚ್ಚು ತಲ್ಲೀನರಾಗಿದ್ದೂ ಸೋಲಿಗೆ ಕಾರಣ ಎನ್ನುವ ಟೀಕೆಗಳಿವೆ.

ಬೌಲಿಂಗ್ ವಿಭಾಗದಲ್ಲಿ ಭಾರತಕ್ಕೆ ಭಾರಿ ಸಮಸ್ಯೆ ಕಾಡಿತು. ವಿಶ್ವಕಪ್ ಆರಂಭದ ಒಂದೆರೆಡು ವರ್ಷಗಳ ಮುಂಚಿತವೇ ಭಾರತ ಬೌಲಿಂಗ್ ವಿಭಾಗ ಬಲಗೊಳಿಸಲು ಗಮನ ಹರಿಸಬೇಕಿತ್ತು. ಭಾರತ ತಂಡದಲ್ಲಿ ಇನ್ನೊಂದು ದೊಡ್ಡ ಸಮಸ್ಯೆ ಇದೆ. ರಾಷ್ಟ್ರೀಯ ತಂಡದಲ್ಲಿ ಆಡಿದ ಆಟಗಾರರು ದೇಶೀಯ ಕ್ರಿಕೆಟ್‌ನಲ್ಲೂ ಆಡಬೇಕೆಂದು ಆಯಾ ರಾಜ್ಯ ಕ್ರಿಕೆಟ್ ಸಂಸ್ಥೆಗಳು ಒತ್ತಾಯಿ–ಸುತ್ತವೆ. ಇದರಿಂದ ಆಟಗಾರರಿಗೆ ಕೊಂಚವೂ ವಿಶ್ರಾಂತಿ ಇಲ್ಲದಂತಾಗುತ್ತದೆ. ಒಂದು ವೇಳೆ ಆಟಗಾರ ದೇಶೀಯ ಟೂರ್ನಿಯಲ್ಲಿ ಆಡಲು ಒಪ್ಪದಿದ್ದರೆ ರಾಜ್ಯ ಸಂಸ್ಥೆಯ ಕೆಂಗಣ್ಣಿಗೆ ಗುರಿಯಾಗಬೇಕಾಗುತ್ತದೆ. ಆದ್ದರಿಂದಲೇ ದೋನಿ, 'ದೇಶೀಯ ಕ್ರಿಕೆಟ್‌ನಲ್ಲಿ ಆಡುವಂತೆ ರಾಷ್ಟ್ರೀಯ ತಂಡದ ಆಟಗಾರರಿಗೆ ಒತ್ತಾಯಿಸಬೇಡಿ' ಎಂದು ಬಹಿರಂಗವಾಗಿಯೇ ಹೇಳಿದ್ದರು.

ಭಾರತ ಟ್ರೋಫಿ ಗೆಲ್ಲದೇ ಮರಳಿತಾದರೂ ಹಿಂದಿನ ಕೆಲ ಪರಂಪರೆಯನ್ನು ಉಳಿಸಿಕೊಂಡಿತು. ವಿಶ್ವಕಪ್‌ನಲ್ಲಿ ಭಾರತ ತಂಡ ಪಾಕಿಸ್ತಾನದ ಎದುರು ಒಮ್ಮೆಯೂ ಸೋತಿಲ್ಲ. ಈ ದಾಖಲೆಯನ್ನು ದೋನಿ ಪಡೆ ಕಾಪಾಡಿಕೊಂಡಿತು. ದಕ್ಷಿಣ ಆಫ್ರಿಕಾದ ಎದುರು ಭಾರತ ಒಮ್ಮೆಯೂ ಗೆದ್ದಿರಲಿಲ್ಲ. ಈ ಕೊರಗನ್ನೂ ನೀಗಿಸಿತು. ಅದೇನಿ ಇರಲಿ, ಸೋಲು ಗೆಲುವು ಕ್ರೀಡೆಯ ಭಾಗ ಎನ್ನುವುದನ್ನು ನಾವು ಒಪ್ಪಿಕೊಳ್ಳಲೇಬೇಕು.